ಯಾರು 'ರದೀತು ಬಿಲ್ಲಾಹಿ ರಬ್ಬನ್, ವ ಬಿಲ್-ಇಸ್ಲಾಮಿ ದೀನನ್, ವ ಬಿ-ಮುಹಮ್ಮದಿನ್ ರಸೂಲನ್' (ಅರ್ಥ: ನಾನು ಅಲ್ಲಾಹನನ್ನು ಪರಿಪಾಲಕನೆಂದು, ಇಸ್ಲಾಮನ್ನು ಧರ್ಮವೆಂದು, ಮತ್ತು ಮುಹಮ್ಮದ್ ರನ್ನು ಸಂದೇಶವಾಹಕರೆಂದು ಒಪ್ಪಿ ತೃಪ್ತನಾಗಿದ್ದೇನೆ) ಎಂದು ಹೇಳುತ್ತಾನೋ, ಅವನಿಗೆ ಸ್ವರ್ಗವು ಖಚಿತವಾಯಿತು

ಅಬೂ ಸಈದ್ ಖುದ್ರಿ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅಲ್ಲಾಹುವಿನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಯಾರು
'ರದೀತು ಬಿಲ್ಲಾಹಿ ರಬ್ಬನ್, ವ ಬಿಲ್-ಇಸ್ಲಾಮಿ ದೀನನ್, ವ ಬಿ-ಮುಹಮ್ಮದಿನ್ ರಸೂಲನ್' (ಅರ್ಥ:
ನಾನು ಅಲ್ಲಾಹನನ್ನು ಪರಿಪಾಲಕನೆಂದು, ಇಸ್ಲಾಮನ್ನು ಧರ್ಮವೆಂದು, ಮತ್ತು ಮುಹಮ್ಮದ್ ರನ್ನು ಸಂದೇಶವಾಹಕರೆಂದು ಒಪ್ಪಿ ತೃಪ್ತನಾಗಿದ್ದೇನೆ) ಎಂದು ಹೇಳುತ್ತಾನೋ, ಅವನಿಗೆ ಸ್ವರ್ಗವು ಖಚಿತವಾಯಿತು."
[صحيح] [رواه أبو داود]

ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ತಿಳಿಸುವುದೇನೆಂದರೆ, ಯಾರು "ನಾನು ಅಲ್ಲಾಹುವನ್ನು ಪರಿಪಾಲಕ, ದೇವರು, ಪೋಷಕ, ಮಾಲೀಕ, ಒಡೆಯ ಮತ್ತು ಸುಧಾರಕನೆಂದು ಒಪ್ಪಿ ತೃಪ್ತನಾಗಿದ್ದೇನೆ, ಮತ್ತು ಇಸ್ಲಾಮನ್ನು ಅದರ ಎಲ್ಲಾ ಆದೇಶಗಳು ಮತ್ತು ನಿಷೇಧಗಳೆಂಬ ಶಾಸನಗಳ ಮೂಲಕ ನಂಬಿಕೆ ಮತ್ತು ಶರಣಾಗತಿಯೊಂದಿಗೆ ಧರ್ಮ, ಮಾರ್ಗ ಮತ್ತು ಶರೀಅತ್ ಎಂದು ಒಪ್ಪಿ ತೃಪ್ತನಾಗಿದ್ದೇನೆ, ಮತ್ತು ಮುಹಮ್ಮದ್ ರನ್ನು ಅವರೊಂದಿಗೆ ಕಳುಹಿಸಲಾದ ಮತ್ತು ಅವರು ನಮಗೆ ತಲುಪಿಸಿದ ಎಲ್ಲದರೊಂದಿಗೆ ಸಂದೇಶವಾಹಕ ಮತ್ತು ಪ್ರವಾದಿಯೆಂದು ಒಪ್ಪಿ ತೃಪ್ತನಾಗಿದ್ದೇನೆ" ಎಂದು ಹೇಳುತ್ತಾನೋ ಅವನಿಗೆ ಸ್ವರ್ಗವು ಖಚಿತವಾಗದೇ ಇರದು.

https://sunnah.global/hadeeth/kn/show/65906